ವಿಜಯವಾಣಿ

Online Newspaper Clipping Service

**Dtd- Saturday, 03rd, November- 2018**

Page No.06

# ಎಸ್ಸೆಸ್ಸೆಲ್ಸಿವರೆಗೆ ಕನ್ನಡಕ್ಕೆ ಆದ್ಯತೆ ಸಿಗುವಂತಾಗಲಿ

## ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ ಕಾರ್ಯದರ್ಶಿ ನಾಗರಾಜ್ ಆಶಯ

ವಿಜಯವಾಣಿ ಸುದ್ದಿಜಾಲ ಕೋಲಾರ

ವಿದೇಶಗಳಲ್ಲಿ ಪ್ರಾದೇಶಿಕ ಭಾಷೆಗೆ ಒತ್ತು ನೀಡುವಂತೆ ರಾಜ್ಯದಲ್ಲೂ ಕನಿಷ್ಠ ಎಸ್ಸೆಸ್ಸೆಲ್ಸಿವರೆಗೆ ಕನ್ನಡ ಭಾಷೆಗೆ ಆದ್ಯತೆ ಸಿಗುವಂತಾಗಬೇಕೆಂದು ಶ್ರೀದೇವರಾಜ ಅರಸ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ಕಾರ್ಯದರ್ಶಿ ಜಿ.ಎಚ್.ನಾಗರಾಜ್ ಆಶಿಸಿದರು.

ಶ್ರೀದೇವರಾಜ್ ಅರಸ್ ವೈದ್ಯಕೀಯ ಮಹಾ ವಿದ್ಯಾಲಯದ ಆವರಣದಲ್ಲಿನ ರಜತ ಮಹೋತ್ಸವ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಮಾತನಾಡಿದರು. ತಳ ಮಟ್ಟದಿಂದ ಕನ್ನಡವನ್ನು ಎಲ್ಲರೂ ಕಲಿಯುವಂತಾದರೆ ಕನ್ನಡ ಭಾಷೆ ಬೆಳವಣಿಗೆ ಸಾಧ್ಯ. ಆದರೆ ನಮ್ಮಲ್ಲಿ ಶೇ. 90 ಮಂದಿ ಇಂಗ್ಲೀಷ್ ವ್ಯಾಮೋಹಕ್ಕೆ ಒಳಗಾಗಿರುವುದು ವಿಷಾದನೀಯ ಎಂದರು. ಸಂಸ್ಥೆಯ ಆಡಳಿತ ಮತ್ತು ಹಣಕಾಸು ನಿರ್ದೇಶಕ ಜಿ.ರಾಜೇಂದ್ರ ಮಾತನಾಡಿ, ಅಖಂಡ ಕರ್ನಾಟಕದ ಪ್ರಾಂತ್ಯ ಬಹಳ ವಿಶಾಲವಾಗಿತ್ತು. ಆದರೆ ಹೊಸೂರು, ಕಾಸರಗೋಡು, ಊಟಿ ಸೇರಿ ಅನೇಕ ಕನ್ನಡ ಪ್ರದೇಶಗಳು ಹಂಚಿ ಹೋಗಿದೆ. ಇದೀಗ ಬೆಳಗಾವಿ, ಉತ್ತರ ಕರ್ನಾಟಕ ಪ್ರತ್ಯೇಕದ ಕೂಗುಗಳು ಕೇಳಿ ಬರುತ್ತಿದೆ. ಇದೆ ರೀತಿ ಮುಂದುವರಿಯಲು ಅವಕಾಶ ಕೊಟ್ಟಲ್ಲಿ ಏಕೀಕರಣದ ಮುನ್ನ ಇದ್ದಂತೆ 500ಕ್ಕೂ ಹೆಚ್ಚು ಪ್ರಾಂತ್ಯಗಳ ವಿಭಜನೆಯಾಗಲಿದೆ. ಅದಕ್ಕೆ ಎಂದು ಅವಕಾಶ ಕೊಡಬಾರದು ಎಂದರು.

ಮಹಾವಿದ್ಯಾಲಯದ ಕುಲಾಧಿಪತಿ ಡಾ.ಎಸ್.ಕುಮಾರ್, ಕುಲ ಸಚಿವ ಡಾ.ಎ.ವಿ.ಎಂ.ಕುಟ್ಟಿ, ಡೀನ್ ಡಾ.ಎಂ.ಎಲ್. ಹರೇಂದ್ರ ಕುಮಾರ್, ಕ್ಷ ಕಿರಣದ ಮುಖ್ಯಸ್ಥ ರಾಜೇಗೌಡ, ವೈದ್ಯಕೀಯ ಅಧೀಕ್ಷಕ ಡಾ. ವಿ.ಲಕ್ಷ್ಮಯ್ಯ, ಉಪಪ್ರಾಂಶುಪಾಲ ಎ.ಭಾಸ್ಕರ್, ಡಾ. ಗೋವಿಂದರಾಜು, ನರ್ಸಿಂಗ್ ಕಾಲೇಜಿನ ಡಾ. ವಿಜಯಲಕ್ಷ್ಮೀ, ಡಾ. ಲಕ್ಷ್ಮೀ ಭಟ್, ಆರ್.ಎಲ್. ಜಾಲಪ್ಪ ಶಾಲೆಯ ಪ್ರಾಂಶುಪಾಲೆ ಜೀನಾತ್ ಕೇರಿನಾ ಇದ್ದರು.



ಕೋಲಾರದ ಶ್ರೀದೇವರಾಜ್ ಅರಸ್ ವೈದ್ಯಕೀಯ ಮಹಾ ವಿದ್ಯಾಲಯದಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವವನ್ನು ಎಸ್‌ಡಿಯುಇಟಿ ಕಾರ್ಯದರ್ಶಿ ಜಿ.ಎಚ್.ನಾಗರಾಜ್ ಉದ್ಘಾಟಿಸಿದರು. ಮಹಾವಿದ್ಯಾಲಯದ ಕುಲಾಧಿಪತಿ ಡಾ.ಎಸ್.ಕುಮಾರ್, ಕುಲ ಸಚಿವ ಡಾ.ಎ.ವಿ.ಎಂ.ಕುಟ್ಟಿ ಇದ್ದರು.

ಉದಯವಾಣಿ

# ಜಾಲಪ್ಪ ಕೇಂದ್ರೀಯ ಶಾಲೆಗೆ ಕಂಚಿನ ಪದಕ



ಆರ್.ಎಲ್.ಜಾಲಪ್ಪ ಕೇಂದ್ರೀಯ ಶಾಲೆ ವಿದ್ಯಾರ್ಥಿಗಳು ಅಥ್ಲೆಟಿಕ್ಸ್‌ನಲ್ಲಿ ನಾಲ್ಕು ಕಂಚಿನ ಪದಕಗಳನ್ನು ಗಳಿಸಿದ್ದಾರೆ.

**ಕೋಲಾರ:** ನಗರದಹೊರವಲಯದಲ್ಲಿರುವ ಆರ್.ಎಲ್.ಜಾಲಪ್ಪ ಕೇಂದ್ರೀಯ ಶಾಲೆ ವಿದ್ಯಾರ್ಥಿಗಳು ಅಥ್ಲೆಟಿಕ್ಸ್‌ನಲ್ಲಿ ನಾಲ್ಕು ಕಂಚಿನ ಪದಕಗಳನ್ನು ಗಳಿಸಿದ್ದಾರೆ.

ಬೆಂಗಳೂರು ಸಹೋದಯ ಶಾಲೆಗಳ ಕ್ರೀಡಾಕೂಟದಲ್ಲಿ ತಮಿಳುನಾಡು ಮತ್ತು ಕರ್ನಾಟಕದ ಸುಮಾರು 60 ಶಾಲೆಗಳಿಂದ ಕ್ರೀಡಾಪಟುಗಳು ಭಾಗವಹಿಸಿದ್ದರು. ಆದರಲ್ಲಿ ಆರ್.ಎಲ್.ಜಾಲಪ್ಪ ಕೇಂದ್ರೀಯ ಶಾಲೆಯ 40 ಮಂದಿ ಕ್ರೀಡಾಪಟುಗಳು ಪಾಲ್ಗೊಂಡಿದ್ದರು. ಎತ್ತರ ಜಿಗಿತದ 12 ವರ್ಷ ವಿಭಾಗದಲ್ಲಿ ಲಿಖಿತಾಶ್ರೀ ತೃತೀಯ ಸ್ಥಾನ, ಉದ್ದ ಜಿಗಿತ 14 ವರ್ಷದ ವಿಭಾಗದಲ್ಲಿ ನವ್ಯಶ್ರೀ ತೃತೀಯ ಸ್ಥಾನ, ಗುಂಡು ಎಸೆತ 16 ವರ್ಷದ ವಿಭಾಗದಲ್ಲಿ ಅನನ್ಯ ಜಿ.ರಾಜ್ ತೃತೀಯ ಸ್ಥಾನ, ಎತ್ತರ ಜಿಗಿತ 16 ವರ್ಷದ ವಿಭಾಗದಲ್ಲಿ ಸುಕ್ಷಿತ್ ತೃತೀಯ ಸ್ಥಾನ ಗಳಿಸಿದ್ದಾರೆ. 100ಮೀ. ಓಟ 14 ವರ್ಷದ ವಿಭಾಗದಲ್ಲಿ ನೇಸರ ನಾಲ್ಕನೇ ಸ್ಥಾನ, 100 ಮೀ. ಓಟ 16 ವರ್ಷದ ವಿಭಾಗದಲ್ಲಿ ಚಂದನ್ ನಾಲ್ಕನೇ ಸ್ಥಾನ, ಉದ್ದ ಜಿಗಿತ ಮಧುಶ್ರೀ ನಾಲ್ಕನೇ ಸ್ಥಾನ, ಉದ್ದ ಜಿಗಿತ ಭಗತ್ ನಾಲ್ಕನೇ ಸ್ಥಾನ, 200 ಮೀ. ಓಟ ತನುಷ್ 5ನೇ ಸ್ಥಾನ ಗಳಿಸಿದ್ದಾರೆ.

ದೈಹಿಕ ಶಿಕ್ಷಣ ಶಿಕ್ಷಕರಾದ ಡಿ.ಶಿವಕುಮಾರ್, ಬಾಲಕೃಷ್ಣ ರಾಜೇಶ್ವರಿ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ್ದರು. ಅವರ ಸಾಧನೆಗೆ ಆಡಳಿತಾಧಿಕಾರಿ ಹನುಮಂತರಾವ್, ಶಾಲೆಯ ಪ್ರಾಂಶುಪಾಲೆ ಲಕ್ಷ್ಮೀಭಟ್ ಅಭಿನಂದಿಸಿದ್ದಾರೆ.

ಉದಯವಾಣಿ



ಭೀಮಸೇನೆ ರಾಜ್ಯಾಧ್ಯಕ್ಷ ಪಂಡಿತ್ ಮುನಿವೆಂಕಟಪ್ಪ ಅಭಿಮತ | ದೇವರಾಜ ಅರಸು ವೈದ್ಯಕೀಯ ಸಂಸ್ಥೆಯಲ್ಲಿ ರಾಜ್ಯೋತ್ಸವ

# ಒತ್ತಡ ಹೇರದೇ ಕನ್ನಡ ಕಲಿಸುವ ಪ್ರಯತ್ನ ಆಗಲಿ

ಕೋಲಾರ: ಕನ್ನಡ ಭಾಷೆಯನ್ನು ಒತ್ತಾಯ ಪೂರ್ವಕವಾಗಿ ಜನರ ಮೇಲೆ ಹೇರದೇ ತಾವಾಗಿಯೇ ಕನ್ನಡ ಭಾಷೆಯನ್ನು ಕಲಿಯುವಂತೆ ಮಾಡಬೇಕೆಂದು ಭೀಮಸೇನೆ ರಾಜ್ಯಾಧ್ಯಕ್ಷ ಪಂಡಿತ್ ಮುನಿವೆಂಕಟಪ್ಪ ತಿಳಿಸಿದರು.

ನಗರದ ಹೊರವಲಯದ ದೇವರಾಜ ಅರಸು ಶಿಕ್ಷಣ ಮತ್ತು ಸಂಶೋಧನಾ ಕೇಂದ್ರದಲ್ಲಿ ಶುಕ್ರವಾರ ನಡೆದ 63ನೇ ಕನ್ನಡ ರಾಜ್ಯೋತ್ಸವವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಕೆಲವು ವರ್ಷಗಳ ಹಿಂದೆ ಕೋಲಾರದ ಉರ್ದು ಶಾಲೆಗಳಲ್ಲಿ ಮತ್ತು ಉರ್ದು ಮಾತನಾಡುವ ಜನರಿಗೆ ಒತ್ತಾಯದಿಂದ ಕನ್ನಡ ಕಲಿಸಲು ಮುಂದಾಗಿದ್ದರು. ಆದರೆ, ಅದು ಪರಿಣಾಮ ಬೀರಲಿಲ್ಲ. ಕ್ರಮೇಣ ಇಂದಿನ ಪರಿಸ್ಥಿತಿಯಲ್ಲಿ ಉರ್ದು ಮಾತನಾಡುವ ಜನರೇ ಕನ್ನಡ ಕಲಿಯಲು ಮುಂದಾಗಿದ್ದಾರೆ. ಜನರ ಜೊತೆ ಬೆರೆಯುವ ಅನಿವಾರ್ಯದಿಂದ ಅದು ಸಾಧ್ಯವಾಗಿದೆ ಎಂದರು.

**ಸಾರ್ವತ್ರಿಕ ಶಿಕ್ಷಣ:** 1956 ರ ಮೊದಲು ರಾಜ್ಯದಲ್ಲಿ ಸಾರ್ವತ್ರಿಕ ಶಿಕ್ಷಣ ಜಾರಿಯಾಗದ ಕಾರಣ ಕನ್ನಡ ಶಾಲೆಗಳು ಕಡಿಮೆ ಇದ್ದವು. ಸಾರ್ವತ್ರಿಕ ಶಿಕ್ಷಣ ಜಾರಿಯಾಗಿದ್ದರಿಂದ ಹೆಚ್ಚು ಕನ್ನಡ ಶಾಲೆಗಳು ಪ್ರಾರಂಭವಾದವು. ಕನ್ನಡ ಶಾಲೆಗಳಲ್ಲಿ ಶಿಕ್ಷಣ ಪಡೆದು ಕನ್ನಡದ ಯುವ ಪೀಳಿಗೆ ಉನ್ನತ ಸ್ಥಾನಕ್ಕೇರಲು ಕಾರಣವಾಯಿತು ಎಂದು ಹೇಳಿದರು. ಮಹಿಳೆಯರು ತಮ್ಮ ಶಿಕ್ಷಣಕ್ಕಾಗಿ ಹೋರಾಟ ಮಾಡಿದ ಸಾವಿತ್ರಿ ಬಾಪುಲೆ ಮತ್ತು ಜ್ಯೋತಿ ಬಾಪುಲೆ ಅವರಿಗೆ ಮೊದಲ ಪೂಜೆ ಮಾಡಬೇಕೇ ಹೊರತು ಸರಸ್ವತಿಗೆ ಅಲ್ಲ. ಆ ದೃಷ್ಟಿಯಲ್ಲಿ ಎಲ್ಲರೂ ಕಲಿಯುವ ಮತ್ತು ಅಭಿಮಾನದಿಂದ ಕನ್ನಡವನ್ನು ಉಳಿಸುವ ಕೆಲಸ ಮಾಡಬೇಕಿದೆ ಎಂದರು.



ಕೋಲಾರದ ದೇವರಾಜ ಅರಸು ವೈದ್ಯಕೀಯ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವವನ್ನು ಭೀಮಸೇನೆ ರಾಜ್ಯಾಧ್ಯಕ್ಷ ಪಂಡಿತ್ ಮುನಿವೆಂಕಟಪ್ಪ ಉದ್ಘಾಟಿಸಿದರು.

**ಭಾಷೆ ಆಧಾರಿತ ಶಿಕ್ಷಣಕ್ಕೆ ಒತ್ತು ನೀಡಿ:** ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್.ನಾಗರಾಜ್ ಮಾತನಾಡಿ, ನವೆಂಬರ್ ತಿಂಗಳ ನಂತರ ಕನ್ನಡದ ಬಗ್ಗೆ ಧ್ವನಿ ಎತ್ತದೇ ಇರುವುದು ಸರಿಯಲ್ಲ. ನಿರಂತರವಾಗಿ ಕನ್ನಡ ಉಳಿಸಿ, ಬೆಳೆಸಲು ಮುಂದಾಗಿ ಪ್ರಾದೇಶಿಕ ಭಾಷೆ ಆಧಾರಿತ ಶಿಕ್ಷಣಕ್ಕೆ ಒತ್ತು ನೀಡಬೇಕು ಎಂದು ಹೇಳಿದರು.

**ಇಂಗ್ಲಿಷ್ ವ್ಯಾಮೋಹ ಬೇಡ:** ಕನ್ನಡ ಜ್ಞಾನವನ್ನು ಬೆಳೆಸುವ ವ್ಯವಸ್ಥೆಗೆ ಪೂರ್ವಿಕರ ಕೊಡುಗೆ ಅಪಾರವಾಗಿದೆ. ಆದರೆ, ಇಂಗ್ಲಿಷ್ ವ್ಯಾಮೋಹದಿಂದ ಕನ್ನಡ ಶಾಲೆಗೆ ಮಕ್ಕಳನ್ನು ಸೇರಿಸಲು ಪೋಷಕರು ಹಿಂಜರಿಯುತ್ತಿದ್ದಾರೆ. ಅನೇಕ ಮಂದಿ ಕನ್ನಡದಲ್ಲೇ ವ್ಯಾಸಂಗ ಮಾಡಿ ಸಾಹಿತಿಗಳಾಗಿದ್ದಾರೆ ಎಂದರು.

ಸಂಸ್ಥೆಯ ಹಣಕಾಸು ನಿರ್ದೇಶಕ ಜೆ.ರಾಜೇಂದ್ರ ಮಾತನಾಡಿ, ಅಖಂಡ ಕರ್ನಾಟಕ ಕಲ್ಪನೆ ರಾಜಕೀಯ ಸ್ವಾರ್ಥ ಹಿತಾಸಕ್ತಿಗೆ ಸೀಮಿತವಾಗಿದೆ. ಸರಕಾರಗಳು ಕನ್ನಡ ಭಾಷೆ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಬೇಕೆಂದರು. ಮೊಬೈಲ್ ಬಳಕೆ ಕನ್ನಡ ಭಾಷೆಯಿಂದ ಯುವ ಪೀಳಿಗೆಯನ್ನು ದೂರ ಮಾಡುತ್ತಿದೆ. ವಿದ್ಯಾರ್ಥಿಗಳಿಗೆ ಸರಿಯಾಗಿ ಪತ್ರ ಬರೆಯಲು ಬರುತ್ತಿಲ್ಲ. ಶಿಕ್ಷಕರು ವಿದ್ಯಾರ್ಥಿಗಳಿಗೆ ಸರಿಯಾದ ರೀತಿಯಲ್ಲಿ ಕನ್ನಡ ಕಲಿಸಬೇಕೆಂದು ಸಲಹೆ ನೀಡಿದರು.

ಕುಲಾಧಿಪತಿ ಎಸ್.ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಸಂಸ್ಥೆಯ ರಿಜಿಸ್ಟ್ರಾರ್ ಡಾ.ಎ.ವಿ.ಎಂ.ಕುಟ್ಟಿ, ಪ್ರಾಂಶುಪಾಲ ಡಾ.ಹರೇಂದ್ರ ಕುಮಾರ್, ವೈದ್ಯಕೀಯ ಅಧೀಕ್ಷಕ ಡಾ.ಪಿ.ಲಕ್ಷ್ಮಯ್ಯ, ಉಪ ಪ್ರಾಂಶುಪಾಲ ಎ.ಭಾಸ್ಕರ್, ಡಾ.ರಾಜೇಗೌಡ, ಡಾ.ಗೋವಿಂದರಾಜು, ಡಾ.ವಿಜಯಲಕ್ಷ್ಮೀ, ಡಾ.ಲಕ್ಷ್ಮೀಭಟ್, ಜೀನಿಯಸ್ ಕರೆನಾ ಇದ್ದರು.

ಸಂಯುಕ್ತ ಕರ್ನಾಟಕ



# ಮಾತೃಭಾಷೆಯಲ್ಲಿ ಉನ್ನತ ಶಿಕ್ಷಣ ಸೌಲಭ್ಯಕ್ಕೆ ಆಗ್ರಹ

## ದೇವರಾಜ ಅರಸ್ ವೈದ್ಯಕೀಯ ಕಾಲೇಜಿನಲ್ಲಿ ರಾಜ್ಯೋತ್ಸವ

**ಸಂ.ಕ. ಸಮಾಚಾರ ಕೋಲಾರ**

ಚೈನಾ ಮಾದರಿಯಲ್ಲಿ ಪ್ರಾದೇಶಿಕ ಭಾಷೆಯಲ್ಲಿ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಪದವಿ ಅಧ್ಯಯನಕ್ಕೆ ಸರ್ಕಾರ ಅವಕಾಶ ಕಲ್ಪಿಸಬೇಕೆಂದು ದೇವರಾಜ ಅರಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರದ ಕಾರ್ಯದರ್ಶಿ ಜೆ.ಎಚ್.ನಾಗರಾಜ್ ಆಗ್ರಹಿಸಿದರು.

ಸಂಸ್ಥೆಯಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಮಾತನಾಡಿ, ಹಲವಾರು ದೇಶಗಳಲ್ಲಿ ಮಾತೃಭಾಷೆಯಲ್ಲಿ ಉನ್ನತ ಶಿಕ್ಷಣ ಪಡೆಯುವ ಅವಕಾಶ ಇರುವಾಗ ದೇಶದಲ್ಲೂ ಇದೇ ಮಾದರಿಯ ಅವಕಾಶ ಕಲ್ಪಿಸಿದಲ್ಲಿ ಆಯಾ ರಾಜ್ಯಗಳ ಪ್ರಾದೇಶಿಕ ಭಾಷೆ ಬೆಳವಣಿಗೆ ಸಮರ್ಪಕವಾಗಿ ಆಗುತ್ತದೆಂದರು.

ಕಾನ್ವೆಂಟ್ ಶಿಕ್ಷಣದಿಂದಾಗಿ ಇಂಗ್ಲೀಷ್ ವ್ಯಾಮೋಹ ಬೆಳೆಸಿಕೊಂಡಿರುವ ಪೋಷಕರ ಇಂದಿನ ನಿಲುವಿನಿಂದಾಗಿ ಕನ್ನಡ ಕಡೆಗಣನೆ ಆಗುತ್ತಿರುವುದು ವಿಷಾದನೀಯ, ಹಿಂದಿನ ಕಾಲದಲ್ಲಿ ಸಂಸ್ಕೃತ ಭಾಷೆಯಲ್ಲಿ ಖಗೋಳ ವಿಜ್ಞಾನದ ಅಧ್ಯಯನ ನಡೆದು ಬಾನಂಗಳಕ್ಕೆ ಜನತೆ ಹೋಗಿ ಬಂದಿರುವಾಗ ಇದೀಗ ಕನ್ನಡದಲ್ಲೂ ಅಂತಹ ಸಾಧನೆ ಏಕೆ ಸಾಧ್ಯವಿಲ್ಲ ಎಂದು ಪ್ರಶ್ನಿಸಿದರು.

ನವೆಂಬರ್ ಕನ್ನಡಿಗರ ಸಂಸ್ಕೃತಿಯಿಂದಾಗಿ ಇಂದು ಕನ್ನಡ ಭಾಷೆ ನಾನಾ ಸಮಸ್ಯೆಗಳನ್ನು ಎದುರಿಸುತ್ತಿದ್ದು ಹೀಗಾಗಿ ಕನ್ನಡ ಉಳಿಸಿ ಬೆಳೆಸಲು ಹೋರಾಟ ಮಾಡಬೇಕಾದ ಸ್ಥಿತಿ ಉಂಟಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ ನಾಗರಾಜ್ ಸರ್ಕಾರಗಳು ಪ್ರಾದೇಶಿಕ ಭಾಷೆ ಕುರಿತಂತೆ ಉತ್ತಮ ನಿರ್ಧಾರಗಳನ್ನು ಕೈಗೊಳ್ಳುವ ಮೂಲಕ ಸ್ಥಳೀಯ ಭಾಷೆ ಉನ್ನತಿಗೆ ಸಹಕಾರ ನೀಡಬೇಕೆಂದು ಒತ್ತಾಯಿಸಿದರು.

ದೇವರಾಜ ಅರಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರದ ಹಣಕಾಸು ನಿರ್ದೇಶಕ ಜೆ.ರಾಜೇಂದ್ರ ಮಾತನಾಡಿ, ಕಾನ್ವೆಂಟ್ ಸಂಸ್ಕೃತಿಯಿಂದಾಗಿ ಮಕ್ಕಳು ಆ ಕಡೆ ಇಂಗ್ಲೀಷನ್ನೂ ಸರಿಯಾಗಿ ಕಲಿಯದೆ ಇತ್ತ ಕನ್ನಡವೂ ಸಮರ್ಪಕವಾಗಿ ಬಾರದೆ ಎಲ್ಲವೂ ಅರ್ಧಂಬರ್ಧ ಆಗಿದ್ದು ಇದರ ನಡುವೆ ಇದೀಗ ಉತ್ತುಂಗಕ್ಕೆ ಬರುತ್ತಿರುವ ಮೊಬೈಲ್ ಲಿಪಿಯಿಂದಾಗಿ ಭಾಷೆ ಗೊಂದಲಕ್ಕೆ ಸಿಲುಕಿದ್ದು ಜನರ ಜ್ಞಾನದ ಮಟ್ಟ ಕುಸಿಯುತ್ತಿದೆ ಎಂದು ದೂರಿದರು.

ಹೀಗಾಗಿ ಯುವ ಜನತೆ ಕನ್ನಡ ಪತ್ರಿಕೆಗಳನ್ನು ನಿತ್ಯ ಓದುವುದು, ನಾಟಕಗಳ ವೀಕ್ಷಣೆ,ನಿತ್ಯ ಜೀವನದಲ್ಲಿ ಸ್ವಚ್ಛವಾದ ಕನ್ನಡ ಬಳಕೆ ಮುಂತಾದ ಸರಳವಾದ ಕ್ರಮಗಳ ಮೂಲಕ ಮಾತೃ ಭಾಷೆಯನ್ನು ಬೆಳೆಸಲು ಮುಂದಾಗಬೇಕಿದ್ದು ಇದು ಒಂದೆರಡು ದಿನದ ಕೆಲಸವಲ್ಲ, ನಿರಂತರ ಬದ್ಧತೆಯ ಸಾಧನೆ ಮೂಲಕ ಕನ್ನಡ ಭಾಷೆ ಕಟ್ಟುವ ಕೆಲಸ ಮಾಡಬೇಕು ಎಂದು ಸೂಚಿಸಿದರು.

ವಿಕಿರಣ ವಿಭಾಗದ ಮುಖ್ಯಸ್ಥ ಡಾ.ರಾಜೇಗೌಡ ಮಾತನಾಡಿ, ವಿದ್ಯಾರ್ಥಿಗಳು ಹಾಗೂ ಜನ ಸಾಮಾನ್ಯರು ಕನ್ನಡ ಭಾಷೆಯನ್ನು ಬಳಸುವ ಮೂಲಕ ಪ್ರಾದೇಶಿಕ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಮುಂದಾಗಬೇಕು. ಹಾಗಂತ ಇತರೆ ಭಾಷೆಗಳನ್ನು ವಿರೋಧ ಮಾಡುವುದು ಸರಿಯಲ್ಲ. ವ್ಯವಹಾರಕ್ಕೆ ಬೇಕಾದ ಎಲ್ಲ ಭಾಷೆಗಳನ್ನು ಕಲಿಯುವ ಜತೆಗೆ ಮಾತೃಭಾಷೆಯನ್ನು ಪಸರಿಸುವ ಕೆಲಸವನ್ನು ಮಾಡುವ ಮೂಲಕ ನಿಜ ಕನ್ನಡಿಗರು ಎನಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಸಮಾಜ ಸೇವಕ ಪಂಡಿತ್ ಮುನಿವೆಂಕಟಪ್ಪ ಕಾರ್ಯಕ್ರಮ ಉದ್ಘಾಟಿಸಿದರು. ದೇವರಾಜ ಅರಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರದ ಕುಲಾಧಿಪತಿ ಡಾ.ಎಸ್.ಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕುಲಸಚಿವ ಡಾ.ಎ.ವಿ.ಮೊಯಿದ್ದೀನ್ ಕುಟ್ಟಿ, ವೈದ್ಯಕೀಯ ಕಾಲೇಜಿನ ಪ್ರಿನ್ಸಿಪಾಲ್ ಡಾ. ಎಂ.ಎಲ್.ಹರೇಂದ್ರಕುಮಾರ್, ಅಧೀಕ್ಷಕ ಡಾ.ಪಿ.ಲಕ್ಷ್ಮಯ್ಯ, ಉಪ ಪ್ರಾಂಶುಪಾಲ ಡಾ. ಎ.ಭಾಸ್ಕರ್, ತುರ್ತುನಿಗಾ ಘಟಕದ ಮುಖ್ಯ ವೈದ್ಯಾಧಿಕಾರಿ ಗೋವಿಂದರಾಜು,ನರ್ಸಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಡಾ.ವಿಜಯಲಕ್ಷ್ಮಿ,ಕೇಂದ್ರೀಯ ವಿದ್ಯಾಲಯದ ಪ್ರಿನ್ಸಿಪಾಲ್ ಲಕ್ಷ್ಮೀಭಟ್,ನರ್ಸಿಂಗ್ ಕಾಲೇಜಿನ ವೈಸ್ ಪ್ರಿನ್ಸಿಪಾಲ್ ಪ್ರೊ.ಜೇನತ್ ಇದ್ದರು.



## ಕನ್ನಡ ರಾಜ್ಯೋತ್ಸವಕ್ಕೆ ವಿದೇಶಿ ಮೆರುಗು

ವೈದ್ಯಕೀಯ ಕಾಲೇಜಿನಲ್ಲಿ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ಬೋಟ್ಸ್ವಾನ ನರ್ಸಿಂಗ್ ವಿದ್ಯಾರ್ಥಿಗಳು ಭಾಗವಹಿಸುವ ಮೂಲಕ ನಾಡುಹಬ್ಬಕ್ಕೆ ವಿದೇಶಿ ಮೆರುಗು ತಂದಿದ್ದರು.
ಅಪಘಾತ, ಮಕ್ಕಳ ಬಸಿಯು ನಿರ್ವಹಣೆ ಮತ್ತು ಆಪರೇಷನ್ ಸಂದರ್ಭದ ತರಬೇತಿ ಪಡೆಯಲು ವೈದ್ಯಕೀಯ ಕಾಲೇಜಿಗೆ ಬಂದಿದ್ದ ಸಿಬ್ಬಂದಿಗೆ ಈ ಸಂದರ್ಭದಲ್ಲಿ ಪ್ರಮಾಣಪತ್ರ ನೀಡುವ ಮೂಲಕ ಬೀಳ್ಕೊಡಲಾಯಿತು. 3 ತಿಂಗಳ ತರಬೇತಿಯಿಂದ ತಮ್ಮ ದೇಶದಲ್ಲಿ ಉನ್ನತ ಮಟ್ಟದ ವೈದ್ಯಕೀಯ ಸೇವೆ ಸಲ್ಲಿಸಲು ಸಾಧ್ಯವಾಗಿದೆಯೆಂದು ವಿದೇಶಿ ವಿದ್ಯಾರ್ಥಿಗಳು ಈ ಸಂದರ್ಭದಲ್ಲಿ ಅನುಭವ ಹಂಚಿಕೆ ಮಾಡಿದರು.

ಪ್ರಜಾವಾಣಿ







ಕೋಲಾರದ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯಲ್ಲಿ ಶುಕ್ರವಾರ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ಸಂಸ್ಥೆಯ ಕಾರ್ಯದರ್ಶಿ ಜೆ.ಎಚ್.ನಾಗರಾಜ್ ಮಾತನಾಡಿದರು (ಎಡ ಚಿತ್ರ).
ಕೋಲಾರದ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯಲ್ಲಿ ಶುಕ್ರವಾರ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು

# ರಾಜ್ಯದಲ್ಲಿ ಹೆಚ್ಚಿದ ಪರಭಾಷೆಗಳ ಹಾವಳಿ

## ರಾಜ್ಯೋತ್ಸವದಲ್ಲಿ ದೇವರಾಜ ಅರಸು ಉನ್ನತ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ನಾಗರಾಜ್ ಕಳವಳ

ಪ್ರಜಾವಾಣಿ ವಾರ್ತೆ

ಕೋಲಾರ: 'ನವೆಂಬರ್ ತಿಂಗಳಲ್ಲಿ ಮಾತ್ರ ಕನ್ನಡ ಅಭಿಮಾನ ತೋರಿದರೆ ಸಾಲದು. ವರ್ಷವಿಡೀ ಕನ್ನಡದ ಬಗ್ಗೆ ಅಭಿಮಾನ ಹಾಗೂ ಪ್ರೀತಿ ಇರಬೇಕು' ಎಂದು ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ ಕಾರ್ಯದರ್ಶಿ ಜೆ.ಎಚ್.ನಾಗರಾಜ್ ಹೇಳಿದರು.

ಸಂಸ್ಥೆಯಲ್ಲಿ ಶುಕ್ರವಾರ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ಮಾತನಾಡಿ, 'ವಿದೇಶದಲ್ಲೂ ಪ್ರಾದೇಶಿಕ ಭಾಷೆಗೆ ಒತ್ತು ನೀಡುವಂತೆ ರಾಜ್ಯದಲ್ಲೂ ಕನಿಷ್ಠ ಎಸ್ಸೆಸ್ಸೆಲ್ಸಿವರೆಗೆ ಕನ್ನಡ ಭಾಷೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಎಲ್ಲರೂ ತಳ ಮಟ್ಟದಿಂದ ಕನ್ನಡ ಕಲಿಯುವಂತಾಗಬೇಕು. ಆಗ ಮಾತ್ರ ಭಾಷೆ ಬೆಳವಣಿಗೆ ಸಾಧ್ಯ' ಎಂದರು.

'ರಾಜ್ಯದಲ್ಲಿ ಪರಭಾಷೆಗಳ ಹಾವಳಿ ಹೆಚ್ಚಿದೆ. ಕನ್ನಡಿಗರು ಇಂಗ್ಲಿಷ್ ವ್ಯಾಮೋಹಕ್ಕೆ ಒಳಗಾಗುತ್ತಿದ್ದಾರೆ. ಪ್ರಾದೇಶಿಕ ಭಾಷೆಗಳಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಹಲವರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ. ಆದರೆ, ನಮ್ಮಲ್ಲಿ ಕನ್ನಡ ಭಾಷೆಯ ಬಳಕೆಗೆ ಬಗ್ಗೆ ಇಚ್ಛಾಶಕ್ತಿಯಿಲ್ಲ. ಕನ್ನಡ ಭಾಷೆ ಬಗೆಗಿನ ಕೀಳರಿಮೆ ತೊರೆದು ಮಕ್ಕಳಿಗೆ ಮನೆಯಿಂದಲೇ ಕನ್ನಡ ಕಲಿಸಬೇಕು' ಎಂದು ಸಲಹೆ ನೀಡಿದರು.

**ಮುಖ್ಯಾಂಶಗಳು**

- ವರ್ಷವಿಡೀ ಕನ್ನಡದ ಬಗ್ಗೆ ಅಭಿಮಾನವಿರಲಿ
- ಕನ್ನಡ ಭಾಷೆಗೆ ಹೆಚ್ಚಿನ ಆದ್ಯತೆ ನೀಡಬೇಕು
- ತಳ ಮಟ್ಟದಿಂದ ಕನ್ನಡ ಕಲಿಯಬೇಕು

'ಮಾಸ್ತಿ, ಡಿವಿಜಿ, ಸರ್.ಎಂ.ವಿಶ್ವೇಶ್ವರಯ್ಯ ಸೇರಿದಂತೆ ಹಲವು ಮಹನೀಯರು ಕನ್ನಡದಲ್ಲೇ ಅಧ್ಯಯನ ಮಾಡಿ ಜಾಗತಿಕವಾಗಿ ಅತ್ಯುನ್ನತ ಸಾಧನೆ ಮಾಡಿದ್ದಾರೆ. ಜೀವನೋಪಾಯಕ್ಕಾಗಿ ಬೇರೆ ರಾಜ್ಯಗಳಿಂದ ರಾಜ್ಯಕ್ಕೆ ವಲಸೆ ಬಂದಿರುವ ಜನರಿಗೆ ಕನ್ನಡ ಕಲಿಸಬೇಕು. ಹೊರ ರಾಜ್ಯಗಳ ಜನರನ್ನು ಸಹೋದರರಂತೆ ಕಾಣಬೇಕು. ಭಾಷೆ ವಿಷಯವಾಗಿ ಅವರನ್ನು ಶೋಷಿಸಬಾರದು' ಎಂದು ಕಿವಿಮಾತು ಹೇಳಿದರು.

> 2 ಸಾವಿರ ವರ್ಷಗಳ ಸುದೀರ್ಘ ಇತಿಹಾಸವುಳ್ಳ ಕನ್ನಡ ಭಾಷೆಯು ಪ್ರಾಚೀನ ಭಾಷೆಯಾಗಿದೆ. ಕನ್ನಡ ಕನ್ನಡಿಗರಿಗೆ ಆಸರೆಯಾಗಿ ಬದುಕು ನೀಡುವ ಭಾಷೆಯಾಗಬೇಕು.
> -ರಾಚೇಗೌಡ,
> ಎಸ್‌ಡಿಯುಎಎಚ್‌ಇಆರ್ ಕ್ಷ-ಕಿರಣ ವಿಭಾಗದ ಮುಖ್ಯಸ್ಥ

**ಹೋರಾಟ ರೂಪಿಸಿ:** 'ಕನ್ನಡ ಭಾಷೆಯ ಜತೆಗೆ ನಾಡಿನ ಆಚಾರ, ವಿಚಾರ, ಸಂಸ್ಕೃತಿ ಬೆಳೆಸಬೇಕು. ಕನ್ನಡ ನಾಡಿನಲ್ಲಿ ಕನ್ನಡದ ಉಳಿವಿಗೆ ಸಂಘ ಸಂಸ್ಥೆ ಸ್ಥಾಪಿಸಿ ಹೋರಾಟ ನಡೆಸಬೇಕಾದ ಪರಿಸ್ಥಿತಿ ಎದುರಾಗಿರುವುದು ದುರಂತ. ಕರ್ನಾಟಕ ಏಕೀಕರಣಕ್ಕೆ ಅನೇಕರು ಶ್ರಮಿಸಿದ್ದಾರೆ. ಅಂತಹ ಮಹನೀಯರನ್ನು ಸ್ಮರಿಸಬೇಕು. ನಾಡು ನುಡಿಗೆ ಧಕ್ಕೆಯಾದರೆ ಹೋರಾಟ ರೂಪಿಸಬೇಕು' ಎಂದು ಸಂಸ್ಥೆಯ ನಿರ್ದೇಶಕ ಜೆ.ರಾಜೇಂದ್ರ ಅವರು ತಿಳಿಸಿದರು.

'ಕನ್ನಡ ಸಾಹಿತ್ಯಕ್ಕೆ 8 ಜ್ಞಾನಪೀಠ ಪ್ರಶಸ್ತಿ ಬಂದಿವೆ. ಆದರೆ, ರಾಜ್ಯದಲ್ಲಿ ಕನ್ನಡ ಭಾಷೆ ಬಳಕೆ ಕಡಿಮೆಯಾಗುತ್ತಿದೆ. ಬಹುತೇಕ ಮಂದಿಗೆ ಕನ್ನಡದ ಅರ್ಜಿ ತುಂಬುವ ಸಾಮರ್ಥ್ಯ ಸಹ ಇಲ್ಲ. ಇತ್ತೀಚಿನ ದಿನಗಳಲ್ಲಿ ಕನ್ನಡ ಶಾಲೆಗಳನ್ನು ಮುಚ್ಚುವ ವಾತಾವರಣ ಸೃಷ್ಟಿಯಾಗುತ್ತಿದ್ದು, ಇದು ಒಳ್ಳೆಯ ಬೆಳವಣಿಗೆಯಲ್ಲ' ಎಂದು ಕಳವಳ ವ್ಯಕ್ತಪಡಿಸಿದರು.

**ಪ್ರತ್ಯೇಕತೆ ಕೂಗು:** 'ಅಖಂಡ ಕರ್ನಾಟಕ ಪ್ರಾಂತ್ಯವು ಬಹಳ ವಿಶಾಲವಾಗಿತ್ತು. ಆದರೆ, ಹೊಸೂರು, ಕಾಸರಗೋಡು, ಊಟಿ ಸೇರಿದಂತೆ ಅನೇಕ ಕನ್ನಡ ಪ್ರದೇಶಗಳು ಹಂಚಿ ಹೋಗಿವೆ. ಮತ್ತೊಂದೆಡೆ ಉತ್ತರ ಕರ್ನಾಟಕ ಭಾಗದಲ್ಲಿ ಪ್ರತ್ಯೇಕ ರಾಜ್ಯದ ಕೂಗು ಕೇಳಿಬರುತ್ತಿದೆ. ಇದೇ ರೀತಿ ಮುಂದುವರಿದರೆ ಏಕೀಕರಣಕ್ಕೂ ಮುನ್ನ ಇದ್ದಂತೆ ರಾಜ್ಯವು 500ಕ್ಕೂ ಹೆಚ್ಚು ಪ್ರಾಂತ್ಯಗಳಾಗಿ ವಿಭಜನೆಯಾಗಲಿದೆ' ಎಂದು ಆತಂಕ ವ್ಯಕ್ತಪಡಿಸಿದರು.

ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ ಕುಲಪತಿ ಡಾ.ಎಸ್.ಕುಮಾರ್, ಕುಲಸಚಿವ ಡಾ.ಎ.ವಿ.ಎಂ.ಕುಟ್ಟಿ, ವೈದ್ಯಕೀಯ ಸೂಪರಿಂಟೆಂಡೆಂಟ್ ಡಾ.ಲಕ್ಷ್ಮಯ್ಯ, ಪ್ರಾಂಶುಪಾಲ ಡಾ.ಎಂ.ಎಲ್.ಹರೇಂದ್ರಕುಮಾರ್, ಉಪಪ್ರಾಂಶುಪಾಲ ಎ.ಭಾಸ್ಕರ್, ಭೀಮಸೇನೆ ಸಂಘಟನೆ ರಾಜ್ಯ ಘಟಕದ ಅಧ್ಯಕ್ಷ ಪಂಡಿತ್ ಮುನಿವೆಂಕಟಪ್ಪ ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೋಲಾರಶಕ್ತಿ



# ತಳ ಮಟ್ಟದಿಂದ ಕನ್ನಡ ಕಲಿತರೆ ಮಾತ್ರ ಕನ್ನಡ ಭಾಷೆ ಬೆಳವಣಿಗೆ ಸಾಧ್ಯ: ಜಿ.ಹೆಚ್.ನಾಗರಾಜ್



ಕೋಲಾರ,ನ.1- ತಳ ಮಟ್ಟದಿಂದ ಕನ್ನಡವನ್ನು ಎಲ್ಲರೂ ಕಲಿಯುವಂತಾಗಬೇಕು ಆಗ ಮಾತ್ರ ಕನ್ನಡ ಭಾಷೆ ಬೆಳವಣಿಗೆ ಸಾಧ್ಯ ಎಂದು ದೇವರಾಜ ಅರಸು ವೈದ್ಯಕೀಯ ವಿವಿ ಕಾರ್ಯದರ್ಶಿ ಜಿ.ಹೆಚ್.ನಾಗರಾಜ್ ಕರೆ ನೀಡಿದರು.

ಶುಕ್ರವಾರ ನಗರದ ಶ್ರೀ ... ದೇವರಾಜ್ ಅರಸ್ ವೈದ್ಯಕೀಯ ಮಹಾ ವಿದ್ಯಾಲಯದ ಆವರಣದಲ್ಲಿನ ರಜತ ಮಹೋತ್ಸವ ಸಭಾಂಗಣದಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ವಿದೇಶಗಳಲ್ಲೂ ಪ್ರಾದೇಶಿಕ ಭಾಷೆಗೆ ಒತ್ತು ನೀಡುವಂತೆ ನಮ್ಮ ರಾಜ್ಯದಲ್ಲೂ ಕನಿಷ್ಠ 10ನೇ ವರೆಗೆ ಕನ್ನಡ ಭಾಷೆಗೆ ಹೆಚ್ಚಿನ ಆದ್ಯತೆ ನೀಡುವಂತಾಗಬೇಕು ಎಂದ ಅವರು, ನವೆಂಬರ್ ತಿಂಗಳಿಗೆ ಮಾತ್ರ ಕನ್ನಡದ ಅಭಿಮಾನ ಸೀಮಿತವಾಗದೇ ಜೀವನವಿಡೀ ಸಿಗುವಂತಾಗಬೇಕು ಎಂದು ಹೇಳಿದರು.

ಮಾಸ್ತಿ, ಡಿ.ವಿ.ಜಿ. ಸೇರಿದಂತೆ ಸರ್.ಎಂ.ವಿಶ್ವೇಶ್ವರಯ್ಯ ನವರು ಸಹ ಕನ್ನಡದಲ್ಲೇ ಅಧ್ಯಯನ ಮಾಡಿ ವಿಶ್ವ ಮಟ್ಟದಲ್ಲಿ ಸಾಧನೆ ಮಾಡಿರುವುದು ಅವಿಸ್ಮರಣೀಯ. ಕನ್ನಡ ಭಾಷೆಯನ್ನು ಹೆಚ್ಚು ಅಧ್ಯಯನ ಮಾಡುವ ಜತೆಗೆ ಇತರೆ ವಿಷಯಗಳನ್ನು ಓದುವ ಮೂಲಕ ಜ್ಞಾನವನ್ನು ವೃದ್ಧಿಸಿಕೊಳ್ಳಬೇಕು ಎಂದು ತಿಳಿಸಿದರು.

ಸಂಸ್ಥೆಯ ಆಡಳಿತ ಮತ್ತು ಹಣಕಾಸಿನ ನಿರ್ದೇಶಕ ಜಿ. ರಾಜೇಂದ್ರ, ಕನ್ನಡ ಭಾಷೆಯ ಜತೆಗೆ ನಾಡಿನ ಸಂಸ್ಕೃತಿ, ಪರಂಪರೆಯನ್ನು ಗೌರವಿಸುವಂತಾಗಬೇಕು, ಈ ನಾಡಿನಲ್ಲಿ ಇರುವ ಪ್ರತಿಯೊಬ್ಬರು ಕನ್ನಡ ಕಲಿಯಲೇಬೇಕು ಎಂದರು.

ಕನ್ನಡದ ಸಾಹಿತಿಗಳಿಗೆ, ಕವಿಗಳಿಗೆ, ಚಿಂತಕರು 8 ಜ್ಞಾನಪೀಠ ಪ್ರಶಸ್ತಿ ಗಳಿಸಿದ್ದಾರೆ ಆದರೆ ಕನ್ನಡ ಭಾಷೆಯ ಬಳಕೆ ದಿನೇ ದಿನೇ ಕಡಿಮೆಯಾಗುತ್ತಿದೆ. ಇಂದು ಆಂಗ್ಲ ಭಾಷೆಗೆ ಹೆಚ್ಚಿನ ವ್ಯಾಮೋಹ ವ್ಯಕ್ತವಾಗುತ್ತಿದೆ ಆದರೆ ಬಹುತೇಕ ಮಂದಿಗೆ ಕನಿಷ್ಠ ಒಂದು ಅರ್ಜಿಯನ್ನು ಬರೆಯಲು ಬಾರದೆ, ಇತ್ತ ಕನ್ನಡವು ಬಾರದೆ ತ್ರಿಶಂಕು ಸ್ಥಿತಿಯಲ್ಲಿದ್ದಾರೆ ಎಂದು ಟೀಕಿಸಿದರು.

ಕ್ಷ ಕಿರಣದ ಮುಖ್ಯಸ್ಥ ರಾಜೇಗೌಡ, ಕನ್ನಡ ಭಾಷೆ ಎರಡು ಸಾವಿರ ವರ್ಷಗಳ ಹಿಂದಿನ ಪ್ರಾಚೀನ ಭಾಷೆಯಾಗಿದೆ. ಏಕೀಕರಣ ಹೋರಾಟ, ಕರ್ನಾಟಕವೆಂದು ನಾಮಕರಿಸಿದ ಮುಖ್ಯಮಂತ್ರಿ ದೇವರಾಜು ಅರಸು, ಹಳೇಗನ್ನಡ, ನಡುಗನ್ನಡ, ಹೊಸಕನ್ನಡ ಬಗ್ಗೆ ವಿಶ್ಲೇಷಿಸಿದರು.

ಇದೇ ಸಂದರ್ಭದಲ್ಲಿ ಗೋಸ್ವಾನ ದೇಶದ ನರ್ಸಿಂಗ್ ವಿದ್ಯಾರ್ಥಿಗಳಿಗೆ ಪದವಿ ಪ್ರಶಸ್ತಿ ವಿತರಿಸಿ ಗೌರವಿಸಲಾಯಿತು.

ವೇದಿಕೆಯಲ್ಲಿ ಕುಲಾಧಿಪತಿ ಡಾ.ಎಸ್.ಕುಮಾರ್, ಕುಲ ಸಚಿವ ಡಾ.ಎ.ವಿ.ಎಂ.ಕುಟ್ಟಿ, ಸಮಾಜ ಸೇವಾ ಸುಧಾರಕ ಪಂಡಿತ್ ಮುನಿವೆಂಕಟಪ್ಪ, ವೈದ್ಯಕೀಯ ಅಧೀಕ್ಷಕ ಡಾ. ಪಿ.ಲಕ್ಷ್ಮಯ್ಯ, ಉಪಪ್ರಾಂಶುಪಾಲ ಎ.ಭಾಸ್ಕರ್, ಡಾ. ಗೋವಿಂದರಾಜು, ನರ್ಸಿಂಗ್ ಕಾಲೇಜಿನ ಡಾ. ವಿಜಯಲಕ್ಷ್ಮೀ, ಡಾ. ಲಕ್ಷ್ಮಮ್ಮ ಭಟ್, ಶಾಲ ಪ್ರಾಂಶುಪಾಲೆ ಜೀನಾತ್ ಕೇರಿನಾ ಉಪಸ್ಥಿತರಿದ್ದು ಡೀನ್ ಡಾ. ಎಂ.ಎಲ್. ಹರೇಂದ್ರ ಕುಮಾರ್ ಸ್ವಾಗತಿಸಿದರು.